ಅನುಬಂಧ–2

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

ವರ್ಷ	ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು	ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ	ಪಂಪು ಮೋಟಾರು ಸರಬರಾಜು ವಿವರ	ವಿದ್ಯುತ್ ಸಂಪರ್ಕ ಕಲ್ಪಿಸಿರುವುದು
2009–10	ಮೆ:ಕೆ.ಪಿ.ಎಂ.ಬೋರ್‌ವೆಲ್ಸ್	19	19	14
2010–11	ಮೆ: ವೆಂಕಟೇಶ್ವರ ಟ್ಯೂಬ್‌ವೆಲ್ಸ್	18	18	8
2011–12	ಮೆ:ವೆಂಕಟೇಶ್ವರ ಟ್ಯೂಬ್‌ವೆಲ್ಸ್	7	–	0
	ಒಟ್ಟು	44	37	22

ಬಸ್ ವ್ಯವಸ್ಥೆ ಇಲ್ಲದಿರುವುದು

102 : (73)

ಶ್ರೀ ವೈ.ಎನ್.ರುದ್ರೇಶ್‌ಗೌಡ (ಬೇಲೂರು)

ಅ) ಬೇಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ಭಾಗಗಳಿಗೆ ಸೂಕ್ತ ಬಸ್ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಸ್ಥಳೀಯ ಶಾಸಕರು ಸಾರ್ವಜನಿಕರ ಕೋರಿಕೆಯಂತೆ ಬಸ್ ವ್ಯವಸ್ಥೆ (ರೂಟ್) ಮಾಡಲು ಕೋರಿದ್ದರೂ, ಸ್ಥಳೀಯ ನಿಗಮದ ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದು (ವಿಭಾಗ ನಿಯಂತ್ರಣಾಧಿಕಾರಿಗಳು) ಸರ್ಕಾರದವರ ಗಮನಕ್ಕೆ ಬಂದಿದೆಯೇ:

ಇ) ಇಂತಹ ಅಧಿಕಾರಿಗಳ ಮೇಲೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್.ಅಶೋಕ್ (ಮಾನ್ಯ ಉಪಮುಖ್ಯಮಂತ್ರಿಗಳು –ಗೃಹ ಮತ್ತು ಸಾರಿಗೆ))

ಅ) ಬೇಲೂರು ವಿಧಾನ ಸಭಾ ಕ್ಷೇತ್ರದ ಗ್ರಾಮೀಣ ಭಾಗಗಳಿಗೆ ಸಾರ್ವಜನಿಕರ ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಆದಾಗ್ಯೂ, ಪ್ರಸ್ತುತ ಬೇಲೂರಿನಲ್ಲಿ ನಿಗಮದ ವತಿಯಿಂದ ಬಸ್ ಘಟಕ ನಿರ್ಮಾಣ ಕಾಮಗಾರಿಯು ನಡೆಯುತ್ತಿದ್ದು, ಮುಕ್ತಾಯಗೊಂಡ ನಂತರ, ಬೇಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಸಾರಿಗೆ ಸೌಲಭ್ಯವನ್ನು ಕಲ್ಪಿಸಿಕೊಡಲು ಕ್ರಮಕ್ಕೈಗೊಳ್ಳಲಾಗುವುದು.

ಆ) ಮತ್ತು ಇ) ಮಾನ್ಯ ಶಾಸಕರ ಕೋರಿಕೆಯನ್ನಾಧರಿಸಿ, ಬೇಲೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ, ಕೆಳಕಂಡಂತೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ.

1) ಮೂದಿಗೆರೆ ಗ್ರಾಮದಲ್ಲಿರುವ ಬಿ.ಜಿ.ಎಸ್. ಪದವಿಪೂರ್ವ ಕಾಲೇಜಿನ ಬಳಿ ಸಾರಿಗೆಗಳಿಗೆ ಕೋರಿಕೆ ನಿಲುಗಡೆಯನ್ನು ಮೇ–2012ರಿಂದ ಜಾರಿಗೆ ಬರುವಂತೆ ಕಲ್ಪಿಸಲಾಗಿದೆ.

2) ಚಿಕ್ಕಮಗಳೂರು ವಿಭಾಗ, ಸಕಲೇಶಪುರ ಘಟಕದ ಅನುಸೂಚಿ ಸಂಖ್ಯೆ:131ರಲ್ಲಿ ಬೇಲೂರಿನಿಂದ ಗೋವಿನಹಳ್ಳಿ ಮಾರ್ಗಕ್ಕೆ ಬೆಳಿಗ್ಗೆ ಹಾಗೂ ಸಂಜೆಯ ವೇಳೆಯಲ್ಲಿ ತಲಾ ಒಂದೊಂದು ಸುತ್ತುವಳಿಯ ಸಾಮಾನ್ಯ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಹಾಗೆಯೇ, ಈ ಹಿಂದೆ ಬೇಲೂರಿನಿಂದ ಅಡವಿಬಂಟೆನಹಳ್ಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಆದರೆ, ಸದರಿ ಸಾರಿಗೆಯ ಆದಾಯವು ಉತ್ತೇಜಿತವಾಗದೇ ನಷ್ಟವನ್ನು ಅನುಭವಿಸಿದ ಕಾರಣ, ರದ್ದುಗೊಳಿಸಲಾಗಿದೆ. ಆದಾಗ್ಯೂ, ಈ ಗ್ರಾಮಕ್ಕೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಪ್ರಸ್ತುತ ರದ್ದುಗೊಳಿಸಿರುವ ಸಾರಿಗೆಯನ್ನು ಪುನಃ ಪ್ರಾರಂಭಿಸಲು ಕ್ರಮಕ್ಕೈಗೊಳ್ಳಲಾಗುವುದು.